ಕತೆ 'ಸಿಂಧು'. 'ಶೂ ಪಾಲಿಶ್ ಹುಡುಗ'. ಮುಂಬೈನ ಲಕ್ಷಾಂತರ ದುಡಿಯುವ ಮಕ್ಕಳ ನಡುವೆ ಅನಾಮಿಕನಾಗಿ ದುಡಿಯುತ್ತಿದ್ದ ಹುಡುಗ ಒಂದು ದಿನ ಯಾವುದೋ ಕಾರ್ಯಕ್ರಮಕ್ಕಾಗಿ ಟೀವಿ ಸಂದರ್ಶನದಲ್ಲಿ ಪಾತ್ರವಹಿಸಿ ಪ್ರಖ್ಯಾತನಾಗುವುದು. ಆದರೆ ಅದು ಎಷ್ಟು ಕ್ಷಣಿಕ ಮತ್ತು ಅಪ್ರಯೋಜಕ ಎಂದು ನಂತರ ಅರಿಯುವುದು... ಎರಡೂ ಸರಳವಾದ ಕತೆಗಳು. 'ಮಯೂರ' ಪತ್ರಿಕೆಯಲ್ಲಿ ಪ್ರಕಟವಾಗಿದ್ದುವು. 'ಶೂ ಪಾಲಿಶ್ ಹುಡುಗ' ಮಯೂರದ ಮಕ್ಕಳೇ ಮುಖ್ಯ ಪಾತ್ರಗಳಾಗಿದ್ದ ಕತೆಗಳ ವಿಶೇಷ ಸಂಚಿಕೆಗೆ ಆಯ್ಕೆಯಾದದ್ದು ನನ್ನ ಆತ್ಮವಿಶ್ವಾಸ ಹೆಚ್ಚಿಸಿತು.

ನಾನೊಂದು ಕತೆ ಬರೆಯುವಾಗ ಯಾವುದೇ ಸೂಕ್ಷ್ಮಗಳು ಭಾಷೆಗಿಂತಲೂ ಚಿತ್ರಿಕೆಗಳಲ್ಲಿ ಮೂಡುತ್ತವೆ. ಅದೇಕೋ ನಾನು ಹೇಳಬೇಕಾದ್ದನ್ನು ದಾಟಿಸಲು ಪ್ರತಿಮೆಗಳೇ ಹೆಚ್ಚು ಪರಿಣಾಮಕಾರಿ ಎಂದು ಅನ್ನಿಸುತ್ತದೆ. ಇದು ಸಹಜವಾಗಿ ನನ್ನ ಬರವಣಿಗೆ ಮೂಡುವ ಕ್ರಮ. ನಾನು ನಾಟಕ, ಟೀವಿ, ಕಮರ್ಶಿಯಲ್ಸ್, ಅಡ್ವರ್ಟೈಜಿಂಗ್ ಕಾಪಿರೈಟಿಂಗ್ ಅಂತಹ ಬೇರೆಬೇರೆ ದೃಶ್ಯ ಮಾಧ್ಯಮಗಳಲ್ಲಿ ಕೆಲಸ ಮಾಡಿರುವುದೂ ಇದಕ್ಕೆ ಕಾರಣವಿರಬಹುದು. ಅದೆಲ್ಲೋ ನನ್ನ ಮನಸ್ಸಿನಾಳದಲ್ಲಿ ಕೆಲಸಮಾಡುತ್ತಿರಬಹುದು.

ಜಾಹೀರಾತುಗಳಿಗೆ ನಾನು ಬರೆಯುತ್ತಿದ್ದುದು ಇಂಗ್ಲಿಷ್ ಭಾಷೆಯಲ್ಲಿ. ಜಾಹೀರಾತುಗಳಲ್ಲಿ ಅತಿ ಪರಿಣಾಮಕಾರಿಯಾಗಿ ಅತಿ ಕಡಿಮೆ ಪದಗಳಲ್ಲಿ ಹೇಳುವುದರ ಮೇಲೆ ಒತ್ತು ಕೊಟ್ಟಿರುವುದರಿಂದ ಅದು ಅಭ್ಯಾಸವಾಗಿ ಹೋಯಿತು. ಹಾಗಾಗಿ ನನ್ನ ಕನ್ನಡದ ಬರವಣಿಗೆಯೂ ಚುರುಕಾಗಿ ಭಿನ್ನವಾಗಿ ಮೂಡತೊಡಗಿತು ಅನ್ನಿಸುತ್ತದೆ

ಬರೀ ಕೌಟುಂಬಿಕ ವಿಷಯಗಳನ್ನಿಟ್ಟುಕೊಂಡು ಕತೆಗಳನ್ನು ಬರೆಯುವುದು ಇದುವರೆಗೆ ನನಗಷ್ಟು ಉತ್ಸಾಹ ಹುಟ್ಟಿಸಿಲ್ಲ. ನನ್ನ ಕತೆ ನಮ್ಮ ಸುತ್ತಲಿನ ಜಗತ್ತಿನಿಂದ ಇನ್ನೂ ಹೆಚ್ಚಿನದೇನನ್ನೋ ಒಳಗೊಂಡಾಗ ಕತೆ ಚೈತನ್ಯಕಾರಿಯಾಗುತ್ತದೆ. ಯಾವಾಗಲೂ ನನ್ನ ಕತೆ ಹೊಸತೇನನ್ನೋ ಹೇಳಬೇಕು ಅಥವಾ ಹೊಸ ರೀತಿಯಲ್ಲಿ ನಿರೂಪಣೆಗೊಂಡಿರಬೇಕು ಅಥವಾ ತಿಳಿಯದಿರುವುದೇನನ್ನೋ ಒಳಗೊಂಡಿರಬೇಕು. ನನ್ನ ಅರಿವಿನ ವಲಯವನ್ನು ಹಿಗ್ಗಿಸಬೇಕು... ಇಲ್ಲದಿದ್ದರೆ ತೃಪ್ತಿ ಸಿಗುವುದಿಲ್ಲ.

ನಮ್ಮ ಕತೆ ಲೇಖನಗಳ ಬಗ್ಗೆ ಚರ್ಚಿಸಲು ಮುಂಬೈಯಲ್ಲಿ ನನಗಿದ್ದುದು ಒಂದು ಆಪ್ತವಲಯ. ಯಶವಂತ ಚಿತ್ತಾಲ, ಜಯಂತ ಕಾಯ್ಕಿಣಿ, ಮುಕುಂದ ಜೋಶಿ, ಮಿತ್ರಾ ವೆಂಕಟ್ರಾಜ್, ತುಳಸಿ ವೇಣುಗೋಪಾಲ್ ಮುಂತಾದವರೊಂದಿಗೆ ಫೋನ್ ಮೇಲಾದರೂ ವಾರಕ್ಕೆರಡು ಸಲವಾದರೂ ಹರಟೆ. ಕತೆಗಳ ಚರ್ಚೆ, ವಿನಿಮಯ. ಅಷ್ಟು ದೊಡ್ಡ ಸಾಹಿತಿಯಾಗಿದ್ದ ಚಿತ್ತಾಲರು ಕೂಡ ಮಗುವಿನಂತೆ ಚೂರೂ ಅಹಂ ಇಲ್ಲದೆ ಎಲ್ಲಾ ಮಾತುಕತೆಗಳಲ್ಲಿಯೂ ಪಾಲ್ಗೊಳ್ಳುತ್ತಿದ್ದುದನ್ನು ಮರೆಯಲೇ ಸಾಧ್ಯವಿಲ್ಲ.

ಸುಮಾರು 90ರ ದಶಕದಲ್ಲಿ ನಾನು ಲಂಕೇಶ್ ಪತ್ರಿಕೆಗೆ ಬರೆಯ ತೊಡಗಿದೆ. ನನ್ನ ಕತೆಗಳನ್ನು ಇಷ್ಟಪಟ್ಟ ಅವರು ನನಗೆ 'ಮುಂಬೈ ಡೈರಿ' ಕಾಲಂ ಬರೆಯಲು ಹೇಳಿದರು. ಜೊತೆಗೆ ಯಾವ ಪ್ರಕಾರದಲ್ಲೇ ಆಗಲಿ ಬರೆಯಲು ಅಗಾಧ ಸ್ವಾತಂತ್ರ್ಯ ಕೊಟ್ಟರು. ಆಗಲೇ ಅಡ್ವರ್ಟೈಜಿಂಗ್ ಕ್ಷೇತ್ರಕಲ್ಲಿ ಡೆಡ್ ಲೈನ್‌ಗಳೊಂದಿಗೆ ಸೆಣಸುತ್ತಿದ್ದ ನಾನು ಮೊದಲು ಹಿಂಜರಿದೆ. ಕೊನೆಗೆ ಎರಡು ವಾರಕ್ಕೊಮ್ಮೆ ಬರೆಯತೊಡಗಿದೆ. ಮುಂಬೈ ಡೈರಿ ತುಂಬಾ ಜನಪ್ರಿಯವಾಗಿ ನನ್ನ ಬರವಣಿಗೆಯ ದಿಕ್ಕುಗಳನ್ನೇ ಬದಲಿಸಿತು.

ಮುಂಬೈಯಲ್ಲಿ ಮನೆಯಿಂದ ಹೊರಗಡೆ ಕಾಲಿಟ್ಟರೆ ಸಾಕು ವಿಚಿತ್ರ ಸನ್ನಿವೇಶಗಳ